ಕರ್ನಾಟಕ ವಿಧಾನ ಪರಿಷತ್ತು

142 ನೇ ಅಧಿವೇಶನ 2020

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	201
ಮಾನ್ಯ ಸದಸ್ಯರ ಹೆಸರು	:	ಶ್ರೀ. ಕೆ.ಟಿ.ಶ್ರೀಕಂಠೇಗೌಡ (ಪದವೀಧರ ಕ್ಷೇತ್ರ)
ಉತ್ತರಿಸುವ ದಿನಾಂಕ	:	09-12-2020
ಉತ್ತರಿಸುವ ಸಚಿವರು	:	ಮಾನ್ಯ ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಮೈಸೂರು ಬೆಂಗಳೂರು ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತ್ತಿರುವ ಮದ್ದೂರು-ಶಿವಪುರದ ಮೂಲಕ ಕೊಪ್ಪ-ನಾಗಮಂಗಲ-ಬೆಳ್ಳೂರು ಕ್ರಾಸ್ ನಲ್ಲಿ ಬೆಂಗಳೂರು-ತುಮಕೂರು ರಸ್ತೆಗೆ ರಾಷ್ಟ್ರೀಯ ಹೆದ್ದಾರಿಗೆ ಸೇರಿರುವ ಈ ರಸ್ತೆ ಅಭಿವೃದ್ಧಿಗೆ ಸರ್ಕಾರ ಅನುಮೋದನೆ ನೀಡಿದೆಯೇ? (ವಿವರ ನೀಡುವುದು)	1)ಮೈಸೂರು ಬೆಂಗಳೂರು ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಮದ್ದೂರು-ಶಿವಪುರ ಮೂಲಕ ಕೊಪ್ಪ ನಾಗಮಂಗಲ ಬೆಳ್ಳೂರು ಕ್ರಾಸ್‌ನಲ್ಲಿ ಬೆಂಗಳೂರು ತುಮಕೂರು ರಸ್ತೆ ಎನ್ ಹೆಚ್ ಕೂಡುವ ರಸ್ತೆಯಲ್ಲಿ ಕೌಡ್ಲೇಯಿಂದ ನಾಗಮಂಗಲದವರಗಿನ ಸರಪಳಿ 90.380 ರಿಂದ 113.64 ರವರೆಗೆ ಒಟ್ಟು 23.26 ಕಿ.ಮೀನಷ್ಟು ಭಾಗವು ಕೆಶಿಪ್ ವ್ಯಾಪ್ತಿಯಲ್ಲಿ ಬರುತ್ತಿದ್ದು ಇದರಲ್ಲಿ ರಾಜ್ಯ ಹೆದ್ದಾರಿ 85 ಮತ್ತು 84 ರ 1.68 ಕಿ.ಮೀ ಉದ್ದದ ಓವರ್‌ಲ್ಯಾಪ್ ಭಾಗವನ್ನು ಕೆಶಿಪ್-2ರಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಉಳಿದ 21.58 ಕಿ.ಮೀ ಉದ್ದದ ರಸ್ತೆ ಅಭಿವೃದ್ಧಿಯನ್ನು ಕೆಶಿಪ್-III ಯೋಜನೆಯಲ್ಲಿ (ಏಷಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನಲ್ಲಿ) ಕೈಗೊಂಡಿರುವ ರಾಜ್ಯ ಹೆದ್ದಾರಿ ಸಂ:85ರ ಮಾಗಡಿಯಿಂದ ಸೋಮವಾರಪೇಟೆವರೆಗಿನ (ಒಟ್ಟು 166ಕಿ.ಮೀ. ನಷ್ಟು ಉದ್ದ) ರಸ್ತೆ ಕಾಮಗಾರಿಯ ಭಾಗವಾಗಿರುತ್ತದೆ. ಸದರಿ ರಸ್ತೆ ಕಾಮಗಾರಿಯನ್ನು ಹೈಬ್ರಿಡ್ ಆನ್ಯೂಟಿ ಮಾದರಿಯ ಗುತ್ತಿಗೆಯನ್ನು ರಿಯಾಯಿತಿದಾರರದ ಮೆ//.ಕೆ.ಎನ್.ಆರ್. ಕನ್ಸಟ್ರಕ್ಷನ್ಸ್ ರವರಿಗೆ ವಹಿಸಕೊಡಲಾಗಿದ್ದು, ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಯೋಜನೆಯನ್ನು ಜೂನ್-2022ಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ. 2)ಎಸ್.ಹೆಚ್.ಡಿ.ಪಿ. ವತಿಯಿಂದ ಪ್ಯಾಕೇಜ್ 330 (ಎ) ಮಂಡ್ಯ ಜಿಲ್ಲೆ ಮದ್ದೂರು ಮತ್ತು ನಾಗಮಂಗಲ ತಾಲ್ಲೂಕು ವ್ಯಾಪ್ತಿಗೆ ಬರುವ ಮದ್ದೂರು ನಾಗಮಂಗಲ ರಸ್ತೆ (ಜಿಲ್ಲಾ ಮುಖ್ಯ ರಸ್ತೆ) ಸರಪಳಿ 0.00 ಕಿಮೀ ರಿಂದ 26.16 ವರೆಗೆ (ಆಯ್ದ ಭಾಗಗಳು) ಒಟ್ಟು 14.26 ಕಿಮೀ ಉದ್ದದ ರಸ್ತೆ ಕಾಮಗಾರಿಯನ್ನು ರೂ. 918.83 ಲಕ್ಷ ಗುತ್ತಿಗೆ ಮೊತ್ತದಲ್ಲಿ ಅಭಿವೃದ್ಧಿ ಪಡಿಸಲು ಯೋಜಿಸಲಾಗಿದ್ದು, ಕಾಮಗಾರಿಯನ್ನು ಕೆ.ಗೌಡ & ಕೋ, ಬೆಂಗಳೂರು ರವರಿಗೆ ವಹಿಸಲಾಗಿದ್ದು, ಭೌತಿಕವಾಗಿ 3.77 ಕಿಮೀ ರಸ್ತೆ ಕಾಮಗಾರಿ ಪೂರ್ಣಗೊಂಡಿದ್ದು, ಉಳಿದ ರಸ್ತೆ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.